ಮಾಡಿಸಿಕೊಳ್ಳುತ್ತಾರೆ. ಎಷ್ಟೋ ಬಾರಿ ಮದುವೆ ಹುಡುಗಿ ಇವಳೇನಾ ಎಂದು ಗಂಡಿಗೇ ಕನ್ಫ್ಯೂಸ್ ಆಗುವ ಮಟ್ಟಿಗೆ ಹುಡುಗಿಯ ಮುಖ ಬದಲಾಗಿರುತ್ತದೆ. ಮದುವೆ ಒಮ್ಮೆ ಆಗುವುದು. ಯಾವುದಕ್ಕೂ ಕಂಜೂಸುತನ ಮಾಡದೆ, ಇರುವ ಆಯ್ಕೆಗಳನ್ನೆಲ್ಲ ಬಳಸಿಕೊಳ್ಳಬೇಕು ಎನ್ನುವುದೇ ಈ ಅತಿರೇಕಕ್ಕೆ ಕಾರಣವಾಗುತ್ತದೆ.

ಇಂಥ ಮುಜುಗರವನ್ನು ತಪ್ಪಿಸಿಕೊಳ್ಳಲು ಮದುವೆಗೂ ಮುಂಚೆ ಒಮ್ಮೆ ಮೇಕಪ್ ಟ್ರಯಲ್ ನೋಡಿ. ಯಾವ ರೀತಿಯ ಮೇಕಪ್. ಕೇಶವಿನ್ಯಾಸ ನಿಮ್ಮ ವ್ಯಕ್ತಿತ್ವಕ್ಕೆ ಸರಿ ಹೊಂದುತ್ತದೆ ಎಂದು ಖಚಿತಪಡಿಸಿಕೊಳ್ಳಿ.

'ಮಿನಿಮಲ್ ಮೇಕಪ್ ವಿತ್ ಗ್ಲಾಸಿ ಲುಕ್ ಇಂದಿನ ಟ್ರೆಂಡ್. ನ್ಯಾಚುರಲ್ ಮೇಕಪ್ ಮದುವೆಗೆ ಹೆಚ್ಚು ಹೊಂದುತ್ತದೆ. ಮದುವೆ ಹೆಣ್ಣಿಗೆ ನ್ಯಾಚುರಲ್ ಮೇಕಪ್ ಒಳ್ಳೆಯದು. ಮುಖದ ಮೇಲಿರುವ ಕಪ್ಪು ವರ್ತುಲ, ಪಿಂಪಲ್ಸ್‌ಗಳು ಕಾಣದಂತೆ ಮಾಡುವುದು ಮುಖ್ಯವಾಗಬೇಕು. ಹೀಗಾಗಿ ಬೇಸಿಕ್ ಫೌಂಡೇಶನ್ ಹಾಕಿ ಕಣ್ಣು, ಕಣ್ಣಿನ ರೆಪ್ಪೆ, ಹುಬ್ಬು, ತುಟಿ ಎದ್ದು ಕಾಣುವಂತೆ ಮೇಕಪ್ ಟಚ್ ಕೊಡಬೇಕು. ಇನ್ನು ಮದುವೆ ಹತ್ತಿರ ಬರುತ್ತಿದ್ದಂತೆ ಮುಖದಲ್ಲಿ ಹೆಚ್ಚು ಗ್ಲೋ ಇರಬೇಕು ಎಂದೂ ಅನೇಕರು ಬಯಸುತ್ತಾರೆ. ಹೀಗಾಗಿ ಬ್ಯೂಟಿ ಪಾರ್ಲರ್‌ಗಳಲ್ಲಿ ಮೊದಲಿನಿಂದಲೂ ಫೇಷಿಯಲ್‌ಗಳನ್ನು ಮಾಡಿಸಿಕೊಳ್ಳಬಹುದು. ಅದು ಅಸಾಧ್ಯ ಎನ್ನುವವರು ಒಂದು ವಾರಕ್ಕೆ ಮುಂಚಿನಿಂದ ಮನೆಯಲ್ಲೇ ಸಿಗುವ ತರಕಾರಿ ಹಣ್ಣುಗಳಿಂದಲೂ ಫೇಸ್‌ಪ್ಯಾಕ್ ಮಾಡಿಕೊಂಡು ಮುಖದ ಗ್ಲೋ ಹೆಚ್ಚಿಸಿಕೊಳ್ಳಬಹುದು. ಸವತೆಕಾಯಿ, ಮೊಸರು, ಅರಿಷಿನಗಳ ಬಳಕೆಯಿಂದಲೂ ಮುಖಕ್ಕೆ ಕಾಂತಿ ತಂದುಕೊಳ್ಳಬಹುದು. ಇಲ್ಲವೇ ಬಾಳೆಹಣ್ಣು ಸೇರಿದಂತೆ ವಿವಿಧ ಹಣ್ಣುಗಳ ಫೇಸ್‌ಪ್ಯಾಕ್ ಕೂಡ ಮುಖಕ್ಕೆ ಕಾಂತಿ ನೀಡುತ್ತದೆ' ಎಂದು ಮಾಹಿತಿ ನೀಡುತ್ತಾರೆ ಸೆಲೆಬ್ರಿಟಿ ಹಾಗೂ ವೆಡ್ಡಿಂಗ್ ಮೇಕಪ್ ಆರ್ಟಿಸ್ಟ್ ಆಗಿರುವ ಮಂಜುನಾಥ ನಾರಾಯಣ ಸ್ವಾಮಿ.

## ಕೇಟರಿಂಗ್ ಸೇವೆ

'ಮೂವರು ಮಕ್ಕಳು. ಮೊದಲ ಮಗಳ ಮದುವೆ ಮಾಡೋಕೆ ದುಡ್ಡಿನ ಲೆಕ್ಕ ಹಾಕಲಿಲ್ಲ. ನನ್ನ ಕೈಲಾದಷ್ಟು ಚೆನ್ನಾಗೇ ಮಾಡಿದ್ದೇನೆ. ಆದರೆ ಮದುವೆ ಮುಗಿದು ಕೊನೆಯಲ್ಲಿ ಹೆಚ್ಚುಳಿದ ಆಹಾರವನ್ನು ಚೆಲ್ಲುವಾಗ ಮಾತ್ರ ಮನಸಿಗೆ ತುಂಬಾ ನೋವಾಯ್ತು. ಬೆವರು ಸುರಿಸಿ ಗಳಿಸಿದ ಹಣ ಈ ರೀತಿಯಾಗಿ ಮಣ್ಣಿನ ಪಾಲಾಯ್ತಲ್ಲ' ಎಂದು ತಂದೆಯೊಬ್ಬರು ದುಃಖಿಸುತ್ತಿದ್ದರು. ಇದು ಒಬ್ಬ ತಂದೆಯ ನೋವಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಹೀಗೆಯೇ ಆಗುತ್ತದೆ. ನಮ್ಮಲ್ಲಿ ಊಟ ಚೆನ್ನಾಗಿತ್ತು ಎಂದರೆ ಮದುವೆ ಅದ್ದೂರಿಯಾಗಿ ಆಗಿದೆ ಎಂದರ್ಥ. ಹೀಗಾಗಿಯೇ ಹಣದ ಮುಖ ನೋಡದೆ ಮದುವೆಗೆ ಆಗಮಿಸುವ ಬಂಧು ಬಾಂಧವರಿಗೆ





